


ದ.ರಾ. ಬೇಂದ್ರೆ ಅವರ 'ಸಖೀಗೀತ' ಕನ್ನಡದ ಜಾಣ ಜಾಣೆಯರ ಭಾವಕೋಶಕ್ಕೆ ಎಲ್ಲ ಕಾಲಕ್ಕೂ ಕಾವು ತುಂಬುವ ಕಸುವುಳ್ಳ ಅಪೂರ್ವ ಕಲಾಕೃತಿ. ಒಲವಿನ ಹಲವು ಆಯಾಮಗಳನ್ನು ದಾಂಪತ್ಯದ ನೆಲೆಗಟ್ಟಿನಲ್ಲಿ ಶೋಧಿಸುವ 'ಸಖೀಗೀತ'ದ ಇಲ್ಲಿನ ಹೊಸ ಓದು, ಸಹೃದಯರಿಗೆ ಕಾವ್ಯದ ಬೆಳುದಿಂಗಳನ್ನು ಕರುಣಿಸುವಂತಿದೆ.

ಹೋದರೆ, ಎರಡನೇ ಸಾಲು ಪ್ರತಿ ಸಾರಿಯೂ ಅನಿರೀಕ್ಷಿತವಾದ ಹೊಸದನ್ನೇನೋ ಸೇರಿಸುತ್ತದೆ. ಮೇಲ್ನೋಟಕ್ಕೆ ಇದು ಪದಗಳ ಜೊತೆಗೆ ಆಟವೆಂಬಂತೆ ತೋರಿದರೂ ದಾಂಪತ್ಯದ ಸಂಬಂಧದ ಬಗ್ಗೆ ಸಂಕೀರ್ಣವಾದ ವ್ಯಾಖ್ಯಾನಗಳನ್ನು ನೀಡುತ್ತದೆ. ಮೊದಲ ಸಾಲಿನ 'ನೆಪ್ಪಿಗೆ' ಎನ್ನುವ ಪದವು ಹಿನ್ನೋಟದಲ್ಲಿ ದಾಂಪತ್ಯದ ಅನುಭವವನ್ನು ಅರ್ಥಮಾಡಿಕೊಳ್ಳುವ ಅಥವಾ ವ್ಯಾಖ್ಯಾನಿಸುವುದನ್ನು ಸೂಚಿಸುತ್ತದೆ. ಮರುಹಂಬಲದ ಬದಲಾಗಿ ಪ್ರಾಮಾಣಿಕವಾದ ವಸ್ತುನಿಷ್ಠತೆ ಇಲ್ಲಿ ಕಾಣುತ್ತದೆ. ಈ ಸಂದರ್ಭವು ಆರಂಭವಾಗುವುದು 'ನಮ್ಮ ನಿಮ್ಮ ಒಪ್ಪಿಗೆ' ಇಂದ. ಇದು ಮೊದಲು ತಂದಂಥ ಸಂಭ್ರಮ, ತೃಪ್ತಿಯನ್ನು ಉಜ್ವಲವಾದ ಪ್ರತಿಮೆಗಳಲ್ಲಿ ವರ್ಣಿಸಲಾಗಿದೆ:

ಬಾಳು ಮೊಳೆತು ಸುಗ್ಗಿ ನನೆತು
ಹೂವಿನಂತೆ ಮಾಡಿರೆ
ಆಹಾ ಚೆಲುವೆ ಎಂದು ಕುಣಿದೆ

ಬೇಂದ್ರೆಯವರಿಗೆ ಪ್ರಿಯವಾದ 'ಬೀಜ', 'ಮೊಳೆಯುವುದು', 'ನನೆಯುವುದು', ಇವುಗಳ ಜೊತೆಗೆ ಫಲವಂತಿಕೆಯ ಸಂಭ್ರಮದ ಸೂಚಕವಾದ 'ಸುಗ್ಗಿ'ಯೆನ್ನುವ ಪದವೂ ಇಲ್ಲಿದೆ. ಆದರೆ. ಮುಂದಿನ ಸಾಲು ಹೀಗಿದೆ:

ಮಿಕ್ಕಸಂಜೆ ಮಬ್ಬಿಗೆ

ಸಂತಸದ ಕುಣಿತದ ಆಚೆಗೆ ಮಿಕ್ಕಿ ಉಳಿದ ಮಬ್ಬು ಇದೆ. ಅಥವಾ ಅದನ್ನು ಧಿಕ್ಕರಿಸುವ ಉತ್ಸಾಹವು ಕುಣಿತದಲ್ಲಿದೆ ಎಂದೂ ಓದಬಹುದು. ಹೇಗಿದ್ದರೂ 'ಮಬ್ಬು' ಇದ್ದೇ ಇದೆ. ನನಗೆ ನೆನಪಾಗುವುದು 'ಕೋಲು ಸಖಿ' ಪದ್ಯದಲ್ಲಿ ಬರುವ ಸಾಲುಗಳು:

'ಕಂಗೊಳಿಸುವ ಕೆಂಪು ಮುಂದೆ
ಕಂಗೆಡಿಸುವ ಮಂಜು ಹಿಂದೆ'

ಆ ಪದ್ಯದಲ್ಲಿಯೂ ಕೂಡ ಸಖ–ಸಖಿಯರ ಕುಣಿತದ ತನ್ಮಯತೆ ಮಿಕ್ಕ 'ಮಬ್ಬಿಗೆ', 'ತೀರದ ತೋರದ ಸಂಸಾರದ' ಕಾವಳಕ್ಕೆ ಪ್ರತಿರೋಧಿಯಾಗಿದೆ. ಆ ಕುಣಿತದಿಂದಾಗಿ 'ಸಾವೊಮ್ಮೆ ತಪ್ಪಿತು' ಎನ್ನುವ ಎಚ್ಚರವಿದೆ. ಅಂದರೆ ಈ ಕುಣಿತದ ಹುಟ್ಟು ಇರುವುದೇ ವಿಷಾದಪೂರ್ಣವಾದ ಎಚ್ಚರದಲ್ಲಿ. ಮೈಮರೆತು ಕುಣಿಯುತ್ತಿರುವ ವ್ಯಕ್ತಿಯ ಒಂದು ಕಣ್ಣು ಆ ಕುಣಿತದ ಆಚೆಗಿರುವ ದುಃಖ ಹಾಗೂ ಬವಣೆಗಳ ಮೇಲಿದೆ. ಹಾಗಂತ ಕುಣಿತವು ಒಂದು ಭ್ರಮೆಯಲ್ಲ. ವಾಸ್ತವದಿಂದ ಪಾರಾಗುವ ಪ್ರಯತ್ನವೂ ಅಲ್ಲ.

ಒಂದು ಪದ್ಯವು ಹುಟ್ಟಿದ ಸಂದರ್ಭವನ್ನು ಅದರ ವ್ಯಾಖ್ಯಾನಕ್ಕಾಗಿ ಬಳಸಬಾರದೆಂದು ನವ್ಯ ವಿಮರ್ಶೆಯ ನಂತರ ನಾವೆಲ್ಲ ನಂಬಿದ್ದೇವೆ. ಅದು ಸರಿಯೂ ಹೌದು. ಆದರೆ 'ಬೆಳುದಿಂಗಳ ನೋಡ' ಎನ್ನುವ ಪದ್ಯ ಓದುವಾಗ ಪ್ರಾಯಶಃ ವಾಮನ ಬೇಂದ್ರೆಯವರು ಕೊಟ್ಟಿರುವ ಪದ್ಯದ ಸಂದರ್ಭವು ನನ್ನ ಓದಿಗೆ ಬೇರೆ